ಶ್ರೀ ಆರ್. ವಿ. ದೇಶಪಾಂಡೆ :- ನಾನು ಶೂನ್ಯ ವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಬೇಕೆಂದು ಅಧ್ಯಕ್ಷರ ಕೊಠಡಿಗೆ ಹೋಗಿ ಕೇಳಿದ್ದೇನೆ. ಅವರು ವಿಷಯ ಪ್ರಸ್ತಾಪಿಸಲು ನನಗೆ ಅನುಮತಿ ಕೊಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ :- ನಾನು ಅವರಿಗೆ ಅಪೀಲ್ ಮಾಡುತ್ತಿದ್ದೇನೆ. ಅಧ್ಯಕ್ಷರು ಅನುಮತಿಯನ್ನು ನಿಮಗೆ ಕೊಟ್ಟಿರಬಹುದು, ನನಗೂ ಕೊಟ್ಟಿದ್ದಾರೆ. ನನಗೂ ಹೇಳುವುದಕ್ಕೆ ಅವಕಾಶವಿದೆ. ನಿಮಗೊಬ್ಬರಿಗೆ ಅಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಪಾಯಿಂಟ್ ಆಫ್ ಆರ್ಡರ್, ಮಾನ್ಯ ಅಧ್ಯಕ್ಷರೇ ಶೂನ್ಯ ವೇಳೆಯಲ್ಲಿ ನಮ್ಮ ಅನುಮತಿ ಪಡೆದುಕೊಂಡು ಏನು ನಾವು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇವೆ. ಇದು ಪ್ರಾಮುಖ್ಯವಾದಂಥ ವಿಷಯವಾಗಿದೆ. ಆದರೆ ಶೂನ್ಯ ವೇಳೆಯಲ್ಲಿ ನೀವು ಪ್ರಸ್ತಾಪಿಸುತ್ತಿರುವ ವಿಷಯ ಪ್ರಾಮುಖ್ಯವಾಗಿರತಕ್ಕಂಥಾದ್ದಲ್ಲ. ಅದಕ್ಕೆ ಸರ್ಕಾರ ಉತ್ತರ ಕೊಡಬೇಕಾಗಿಲ್ಲವೆಂದು ಬೇಕಾದರೆ ತಾವು ರೂಲಿಂಗ್ ಕೊಡಿ.

(ಗೊಂದಲ)

ನಾನು ಸದಸ್ಯನಾಗಿ ಹೇಳುತ್ತಿದ್ದೇನೆ ಇದು ತಮ್ಮ ನಿಯಮಾವಳಿಗೆ ವಿರುದ್ಧವಾದ ಮಾತಾಗಿದೆ. ನಿಮಗೆ ಪರೋಕ್ಷವಾಗಿ ಅಪಮಾನ ಮಾಡಿದಂತಾಗುತ್ತದೆ. ನಾವು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವಂಥ ಪ್ರತಿಯೊಂದು ವಿಷಯಕ್ಕೂ ಸರ್ಕಾರ ಉತ್ತರ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಕ್ಕೆ ಉತ್ತರ ಕೊಡಬೇಕಾಗಿಲ್ಲವೆಂದು ರೂಲಿಂಗ್ ಕೊಡಿ.

ಅಧ್ಯಕ್ಷರು :- ಈಗ ಸದನದ ಕಾರ್ಯಕಲಾಪಗಳು ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 2-15ಕ್ಕೆ ಸೇರುವುದು.

(ಸದನವು 1-10 ಕ್ಕೆ ಮುಕ್ತಾಯವಾಗಿ ಪುನಃ ಮಧ್ಯಾಹ್ನ 2-15 ನಿಮಿಷಕ್ಕೆ ಸೇರಲು ನಿಶ್ಚಯಿಸಿತು.)

ಸದನವು ಪುನಃ 2-40 ಕ್ಕೆ ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ ವಿ.ಎಸ್. ಕೌಜಲಗಿ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಗಮನ ಸೆಳೆಯುವ ಸೂಚನೆ

ವಿಷಯ :- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹೊರ ವ್ಯಾಪ್ತಿಯಲ್ಲಿರುವ ರೆವಿನ್ಯೂ ನಿವೇಶನಗಳಲ್ಲಿ ವಾಸವಾಗಿರುವ ಅನೇಕ ಬಡ ಮತ್ತು ಮಧ್ಯಮ ವರ್ಗದ ಜನರ ನಿವೇಶನಗಳ ಸಕ್ರಮ.

ಶ್ರೀ ಕೆ. ಲಕ್ಕಣ್ಣ (ರಾಜಾಜಿ ನಗರ):- ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹೊರ ವ್ಯಾಪ್ತಿಯಲ್ಲಿರುವ ರೆವಿನ್ಯೂ ನಿವೇಶನಗಳಲ್ಲಿ ವಾಸವಾಗಿರುವ ಅನೇಕ ಬಡ ಮತ್ತು ಮಧ್ಯಮ ವರ್ಗದ ಜನರ ನಿವೇಶನಗಳನ್ನು ಸಕ್ರಮಗೊಳಿಸಿ ತೊಂದರೆಯನ್ನು ನಿವಾರಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :- ಅಧ್ಯಕ್ಷರೇ ಬೆಂಗಳೂರು ನಗರ ಭಾಗದ ಮತ್ತು ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಅನಧಿಕೃತ ನಿರ್ಮಾಣವನ್ನು ಸಕ್ರಮಗೊಳಿಸುವ ವಿಚಾರದಲ್ಲಿ ''ಕರ್ನಾಟಕದ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು

ಸಕ್ರಮಗೊಳಿಸುವ ಅಧಿನಿಯಮ 1991'' ಇದನ್ನು ಸರ್ಕಾರವು ಹೊರಡಿಸಿದೆ. ಬೆಂಗಳೂರು ಮತ್ತು ಇತರ ನಗರಗಳ ವ್ಯಾಪ್ತಿಯಲ್ಲಿ ಬರುವ ಅಂತಹ ಅಕ್ರಮ ನಿರ್ಮಾಣಗಳ ವಿಚಾರವು ಈ ಅಧಿನಿಯಮದ ಕಕ್ಷೆಗೆ ಬರುತ್ತವೆ. ಇದೇ ರೀತಿ ಬೆಂಗಳೂರು ಮತ್ತು ಇತರ ನಗರಗಳ ಹೊರಭಾಗದಲ್ಲಿರುವ ತಮ್ಮದೇ ಆದ ರೆವಿನ್ಯೂ ನಿವೇಶನಗಳಲ್ಲಿ ಅವುಗಳ ಮಾಲೀಕರು ಮನೆಗಳನ್ನು ಸೂಕ್ತ ಪೂರ್ವಭಾವಿ ಕೃಷಿಯೇತರ ಬದಲಾವಣೆಯ ಅನುಮತಿಯನ್ನು ಪಡೆಯದೆ ಕಟ್ಟಿಕೊಂಡಿದ್ದಲ್ಲಿ ಅಂತಹ ಮನೆಗಳನ್ನು ಕಟ್ಟಿದ ಜಾಗವನ್ನು ಕೃಷಿಯೇತರ ಉದ್ದೇಶಕ್ಕಾಗಿ ಸಕ್ರಮಗೊಳಿಸುವಂತೆ ಜಿಲ್ಲಾಧಿಕಾರಿಗಳಿಗೆ ಅರ್ಜಿ ಹಾಕಿಕೊಳ್ಳಲು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಇದರ ಕಲಂ 96(4) ರಲ್ಲಿ ಅವಕಾಶವಿರುತ್ತದೆ. ಇದರಂತೆ ಜಿಲ್ಲಾಧಿಕಾರಿಗಳು, ನಿಗದಿತ 'ಕಾಂಪೌಂಡಿಗ ಫೀ' ಯನ್ನು ವಿಧಿಸಿ ಅಂತಹ ಕಟ್ಟಡಗಳನ್ನು ಕೃಷಿಯೇತರ ಉದ್ದೇಶಕ್ಕಾಗಿ ಸಕ್ರಮಗೊಳಿಸಲು ಅವಕಾಶವಿರುತ್ತದೆ. ಬೆಂಗಳೂರು ಮತ್ತು ಇತರ ನಗರಗಳ ಹೊರಗಿನ ಅಂತಹ ಪ್ರಕರಣಗಳಲ್ಲಿ ಅರ್ಜಿಗಳನ್ನು ಸದರಿ ನಿಯಮದ ಕೆಳಗೆ ಪರಿಶೀಲಿಸಲಾಗುತ್ತಿದೆ.

ಶ್ರೀ ಕೆ. ಲಕ್ಕಣ್ಣ :- ಸನ್ಮಾನ್ಯ ಅಧ್ಯಕ್ಷರೆ, ಕಳೆದ 20 ವರ್ಷಗಳಿಂದಲೂ ಕೂಡ ಇಂಥಹ ಮನೆಗಳನ್ನು ನಿರ್ಮಾಣ ಮಾಡಿ ಜನರು ವಾಸಮಾಡುತ್ತಿದ್ದಾರೆ. ಈ ರೀತಿ ವಾಸಮಾಡತಕ್ಕ ಭೂಮಿಯಲ್ಲಿ ಕೆಲವು ಬಿಡಿಎಗೆ ಮತ್ತೆ ಕೆಲವು ರೆವಿನ್ಯೂ ಇಲಾಖೆಗೆ ಸೇರಿದೆ. ಆದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಈ ಮನೆಗಳ ಜಾಗವು ನಮಗೆ ಸೇರಿದೆ ಎಂದು ಹಿಂದೆ ಕೂಡ ಇಂಥ ಮನೆಗಳನ್ನು ಹೊಡೆಯುವ ಕ್ರಮವನ್ನು ಜಾರಿಗೆ ತಂದು ಆ ಕೆಲಸ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ನಮ್ಮ ಮುಖ್ಯ ಮಂತ್ರಿಗಳು ವಿರೋಧ ಪಕ್ಷದ ನಾಯಕರಾಗಿದ್ದರು. ಅವರು ತಡೆಯನ್ನು ತಂದು ಆ ಕೆಲಸವನ್ನು ನಿಲ್ಲಿಸಿ ಅದನ್ನು ಸಕ್ರಮಗೊಳಿಸಿಕೊಡುತ್ತೇವೆ ಎಂದು ಹೇಳಿದ್ದರು. ಆದರೆ ಕಳೆದ 2-3 ತಿಂಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಮನೆಗಳನ್ನು ಕೆಡವತಕ್ಕ ಕ್ರಮವನ್ನು ಜಾರಿಗೆ ತಂದು ಅದನ್ನು ಮಾಡುತ್ತಿದ್ದಾರೆ. ಆದರೆ ಇದು ಸರಿಯಾದ ರೀತಿಯಲ್ಲ ಕಳೆದ ಮೂರು ವರ್ಷಗಳ ನಮ್ಮ ಸರ್ಕಾರದ ನೀತಿಯ ಪ್ರಕಾರ ಮತ್ತು ರಾಜ್ಯಪಾಲರ ಭಾಷಣದಲ್ಲಿಯೂ ಕೂಡ ಇದಕ್ಕೆ ಒಂದು ನೀತಿಯನ್ನು ಜಾರಿಗೆ ತರುತ್ತೇವೆಂದು ಹೇಳಿದ್ದಾರೆ. ಆದರೆ ಇದು ನಿಧಾನದ ಸ್ಥಿತಿಗೆ ಹೋಗಿರುವುದರಿಂದ ಅನೇಕ ಮನೆಗಳನ್ನು ಕೆಡವತಕ್ಕ ಕೆಲಸವನ್ನು ಬಿಡಿಎ ರವರು ಮಾಡುತ್ತಿರುವುದರಿಂದ ಬಡವರು, ಹರಿಜನರು ಮತ್ತು ಕಾರ್ಮಿಕರು ಸುಮಾರು 1,50,000 ರೂಪಾಯಿಗಳನ್ನು ಖರ್ಚುಮಾಡಿ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿರುವವರ ದಿಸೆಯಲ್ಲಿ ಸರ್ಕಾರದ ನೀತಿಯನ್ನು ಬೇಗ ಜಾರಿಗೆ ತಂದು ಅವರಿಗೆ ಸಕ್ರಮ ಮಾಡಿ ನಾಗರೀಕ ಸೌಲಭ್ಯಗಳು ಏನೇನು ಕೊಡಬೇಕೋ ಅವುಗಳನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಇದರ ಬಗ್ಗೆ ಬೆಂಗಳೂರು ಪ್ರಾಧಿಕಾರದವರು ಒಂದು ಆದೇಶವನ್ನು ನೀಡಬೇಕು. ಸರ್ಕಾರದ ಒಂದು ನೀತಿ ಬರುವವರೆಗೆ ಯಾವುದೇ ಮನೆಗಳನ್ನು ಕೆಡವಿ ಹಾಕಬಾರದು ಎನ್ನುವ ಬಗ್ಗೆ ಆದೇಶ ನೀಡಬೇಕು. ಅದು ಬಿ.ಡಿ.ಎ ಯವರ ಜಮೀನು ಆದರೂ ಸಹ ಅದನ್ನು ಸಕ್ರಮ ಮಾಡುತ್ತೇವೆಂದು ಸಚಿವರು ಹೇಳುತ್ತಿದ್ದಾರೆ. ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಆ ದಿಸೆಯಲ್ಲಿ ಕಾನೂನು ಬರುವವರೆಗೆ ಬಿ.ಡಿ.ಎ ಯ ಅಧೀನದಲ್ಲಿತಕ್ಕ ಜಮೀನಾಗಲಿ ಅಥವಾ ರೆವಿನ್ಯೂ ಜಮೀನಾಗಲಿ ಕಟ್ಟಿರುವ ಮನೆಗಳನ್ನು ಹೊಡೆಯುವುದನ್ನು ತಡೆಯುತ್ತೇವೆ ಮತ್ತು 20-30 ವರ್ಷಗಳ ಹಿಂದೆ ಹಳೆಯ ಬಡಾವಣೆಗಳಲ್ಲಿ ಕಟ್ಟಿರುವ ಮನೆಗಳನ್ನು ಸಕ್ರಮ ಮಾಡುತ್ತೇವೆಂದು ಆಚ್ಚೆ ಬಂದಿದೆ. ಅದರಲ್ಲಿ ಬಹುತೇಕ ಜನರಿಗೆ ಹಕ್ಕುಪತ್ರಗಳನ್ನು ನೀಡಿದ್ದಾರೆ. ಕೆಲವು ಭಾಗಗಳಲ್ಲಿ ಶೇಕಡ 20 ಭಾಗ ಮಾತ್ರ ಕೊಡಬೇಕಾಗಿದೆ. ರಾಜಾಜಿನಗರದ ಎರಡನೆಯ ಮತ್ತು ಮೂರನೆಯ ಹಂತ, ಮಂಜುನಾಥ ನಗರ, ಸೋಮೇಶ್ವರ ನಗರಗಳಲ್ಲಿ ಈ ರೀತಿ ಆಗಿದೆ. ದೇವರಾಜ ಅರಸುರವರ ಕಾಲದಲ್ಲಿ ಮತ್ತು ಸುಬ್ರಹ್ಮಣ್ಯರವರ ಕಾಲದಲ್ಲಿ ಇದರ ಬಗ್ಗೆ ಅನಧಿಕೃತ ಆಚ್ಚೆ ಹೋಗಿರತಕ್ಕದ್ದು. ಅದರಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಹಕ್ಕುಪತ್ರಗಳನ್ನು ಕೊಡಬೇಕು. ಈ ಹಕ್ಕುಪತ್ರಗಳನ್ನು ಕೊಡದೇ ಇರುವುದರಿಂದ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರಿಗೆ ಯಾವುದೇ ಹಣವೂ ಏರ್ಪಾಗುವುದಿಲ್ಲ. ಏಕೆಂದರೆ ಇದರಿಂದ ಸುಮಾರು 2 ಕೋಟಿ ರೂ. ಹಣ ಪ್ರಾಧಿಕಾರದವರಿಗೆ ಬರುತ್ತದೆ. ಆದ್ದರಿಂದ ಇದನ್ನು ಸಕ್ರಮ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಭಾಷಣದ ಅರ್ಥ ಇಷ್ಟೇ. ಬೆಂಗಳೂರು ನಗರದ ವ್ಯಾಪ್ತಿಯೊಳಗೆ ಬರತಕ್ಕದ್ದಕ್ಕೆ ಅಕ್ರಮವಾಗಿರುವುದನ್ನು ಸಕ್ರಮಗೊಳಿಸಬೇಕೆಂಬ ಕಾಯಿದೆಯೊಳಗೆ ಬರುತ್ತದೆ. ರೂರಲ್ ಏರಿಯಾದಲ್ಲಿರುವುದಕ್ಕೆ ಲ್ಯಾಂಡ್ ರೆವಿನ್ಯೂ ಆಕ್ಟ್ ಸೆಕ್ಷನ್ 96 (40) ಅನ್ವಯವಾಗುತ್ತದೆ. ಆದರೆ ಇತ್ತೀಚೆಗೆ ಬೆಂಗಳೂರು ಪ್ರಾಧಿಕಾರದವರು ಹೊಸದಾಗಿ ಬಡಾವಣೆಗಳನ್ನು ಮಾಡಿದ್ದಾರೆ. ಆ ಬಡಾವಣೆಗಳಲ್ಲಿ ಕೆಲವು ಅಕ್ರಮವಾಗಿ ಕಟ್ಟಿರತಕ್ಕ ಮನೆಗಳು ಬರುತ್ತವೆ. ಅವುಗಳನ್ನು ಏನು ಮಾಡುತ್ತೀರೆಂದು ಮಾನ್ಯಸದಸ್ಯರು ಕೇಳುತ್ತಿದ್ದಾರೆ. ಇದಕ್ಕೆ ಕಾನೂನಿನಲ್ಲೇ ನಾವು ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಕರ್ನಾಟಕ ರೆಗ್ಯುಲರೈಸೇಶನ್ ಆಫ್ ಆಥರೈಸ್ಡ್ ಕನ್ಸ್‌ಸ್ಟ್ರಕ್ಷನ್ಸ್ ಅರ್ಬನ್ ಏರಿಯಾ ಆಕ್ಟ್‌ನ ಡೆಫಿನಿಷಿಯನ್‌ನಲ್ಲಿ "Urban area means any area within the limits of the city municipality or town municipality declared under the Karnataka Municipalities Act 1964; (2) Any urban area within the limits ofthe Improvement Board established under the Karnataka Improvement Boards Act, 1976 and (3) The Bangalore Metropolitan Area as defined in the Bangalore Development Authority Act, 1976." ಇದು ಬಂದಿರುವುದರಿಂದ ಅದು ಅರ್ಬನ್ ಏರಿಯಾಕ್ಕೆ ಬರುತ್ತದೆ. ಈ ಆಕ್ಟ್ ಅದಕ್ಕೆ ಅನ್ವಯಿಸುತ್ತದೆ. ಅವೂ ಕೂಡ ಸಕ್ರಮವಾಗುತ್ತದೆ. ಇದರಲ್ಲಿ ಯಾವುದೇ ತೊಂದರೆಯಿಲ್ಲ.

ಶ್ರೀ ಕೆ. ಲಕ್ಕಣ್ಣ :- ಸ್ವಾಮಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಮನೆಗಳನ್ನು ಒಡೆಯುತ್ತಿದ್ದಾರೆ. ದಯವಿಟ್ಟು ಯಾವುದೇ ಮನೆಗಳನ್ನು ಒಡೆಯುತ್ತಿದ್ದಾರೆ. ದಯವಿಟ್ಟು ಯಾವುದೇ ಮನೆಗಳನ್ನೂ ಒಡೆಯಬಾರದೆಂದು ಸರ್ಕಾರಿಂದ ಆದೇಶ ಹೋಗಬೇಕು.

ಶ್ರೀ ಎಂ.ವಿ. ರಾಜಶೇಖರ ಮೂರ್ತಿ :- ಸರ್ಕ್ಯೂಲರ್‌ನ್ನು ಇಷ್ಯೂ ಮಾಡುತ್ತೇವೆ.

ಶ್ರೀ ಆರ್. ದಯಾನಂದರಾವ್ :- ಮಾನ್ಯ ಅಧ್ಯಕ್ಷರೇ, 1969 ಮತ್ತು 1974ನೇ ಇಸವಿಯಲ್ಲಿ ಬಡವರು ರೆವಿನ್ಯೂ ಸೈಟುಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದರು. ಆಗ ದಿವಂಗತ ಮಾನ್ಯ ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಾಗ ಅವುಗಳನ್ನೆಲ್ಲಾ ಸಕ್ರಮಗೊಳಿಸಿ ಪೊಸಿಷನ್ ಸರ್ಟಿಫಿಕೇಟನ್ನು ವಿತರಣೆ ಮಾಡಿದ್ದರು. ರೆವಿನ್ಯೂ ಸೈಟುಗಳಲ್ಲಿ ಸುಮಾರು 80 ಪರ್ಸೆಂಟ್ ಜನ ಬಡವರು, ಕೂಲಿ ಕಾರ್ಮಿಕರು ತಮ್ಮ ಮನೆಗಳನ್ನು ಕಟ್ಟಿಕೊಂಡಿದ್ದರು. ಈ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚಿತವಾಗಿ ಸಿ.ಐ.ಟಿ.ಬಿ ಎಂದು ಇತ್ತು. ರೆವಿನ್ಯೂ ಲ್ಯಾಂಡ್‌ಗಳು ಸಿ.ಐ.ಟಿ.ಬಿ ವಶಕ್ಕೆ ಬಂದಿರಲಿಲ್ಲ. ಅಂದರೆ 1960 ಮತ್ತು 1974ನೇ ಇಸವಿಯಲ್ಲಿ ಏನು ಮನೆಗಳನ್ನು ಕಟ್ಟಿಕೊಂಡಿದ್ದರು ಅವುಗಳನ್ನು ಈಗ ಸಕ್ರಮಗೊಳಿಸಿದ್ದಾರೆ. ಬಿ.ಡಿ.ಎ ಅಸ್ತಿತ್ವಕ್ಕೆ ಬಂದ ಮೇಲೆ ಮನೆಗಳು ನಿರ್ಮಾಣವಾಗಿವೆ. ಹಿಂದೆ ರೆವಿನ್ಯೂ ಜಾಗವನ್ನು ಕೆಲವರು ಲೇ ಔಟ್‌ಗಳಾಗಿ ಮಾಡಿ ಖಾಸಗಿಯವರು ಹಂಚಿದ್ದಾರೆ. ಅವುಗಳನ್ನು ಕೆಲವರು ಖರೀದಿ ಮಾಡಿಕೊಂಡು ಅಲ್ಲಿ ಮನೆಗಳನ್ನು ಕಟ್ಟಿದ್ದಾರೆ. ಈ ಜಾಗವನ್ನು ಬಿ.ಡಿ.ಎ.ನವರು ಅಕ್ವಯರ್ ಮಾಡಿದ್ದಾರೆ. ಈ ಲ್ಯಾಂಡಿನಲ್ಲಿ ಕಟ್ಟಿರತಕ್ಕ ಮನೆಗಳಿಗೆ ಪೊಸಿಷನ್ ಸರ್ಟಿಫಿಕೇಟನ್ನು ಕೊಡುವುದನ್ನು ಸರ್ಕಾರ ಕೈಬಿಟ್ಟಿದೆ. ಇದಕ್ಕೆ ಒಂದು ಸ್ಪೆಷಲ್ ಆಕ್ಟ್ ಇರುವುದರಿಂದ ಅದನ್ನು ಅಪ್ಲೈ ಮಾಡಿದರೆ ಆ ಬಡವರಿಗೆ ಪೊಸಿಷನ್ ಸರ್ಟಿಫಿಕೇಟನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ರೀತಿ ಪೊಸಿಷನ್ ಸರ್ಟಿಫಿಕೇಟ್‌ನ್ನು ಕೊಟ್ಟರೆ ಅವರು ಬ್ಯಾಂಕುಗಳಲ್ಲಿ ಸಾಲವನ್ನು ತೆಗೆದುಕೊಂಡು ಚೊಕ್ಕಟವಾದ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು

ಆದಷ್ಟು ಬೇಗ ರೆಗ್ಯುಲರೈಸ್ ಮಾಡಿದರೆ ಬಹಳ ಒಳ್ಳೆಯದೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದರ ಜೊತೆಗೆ ಈಗ ಬಿ.ಡಿ.ಎ. ನವರು ಏನು ಈ ಮನೆಗಳನ್ನು ಒಡೆಯುತ್ತಿದ್ದಾರೆ ಅದನ್ನು ತಕ್ಷಣ ನಿಲ್ಲಿಸಲು ಮುಂಚಾಗರೂಕತೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

Sri M. Rajashekara Murthy :- I have already replied, necessary instructions will be issued to the B.D.A. not to go ahead with the destruction of houses already constructed, subject to the Act that has already been passed.

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಅಧ್ಯಕ್ಷರೇ, ಇದು ಬಹಳ ಪ್ರಮುಖವಾದ ಪ್ರಶ್ನೆ. ನಾನು ಕಾಲಂಗೆ ಅಟೆನ್‌ಷನ್‌ನಲ್ಲಿ ಭಾಗವಹಿಸಲಿಲ್ಲ. ಆದರೆ ಮಾನ್ಯ ಮಂತ್ರಿಗಳು ಕೊಟ್ಟಂಥ ಉತ್ತರದಲ್ಲಿ ಯಾವುದೇ ಆ್ಯಕ್ಟ್ ವಿವರ....

ಅಧ್ಯಕ್ಷರು :- ತಾವು ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲವಾದ್ದರಿಂದ ಬೇರೆ ರೀತಿಯಲ್ಲಿ ಕೇಳಿ.

ಇನ್ನು ಮಾನ್ಯ ವೈ.ಕೆ. ರಾಮಯ್ಯನವರು ಇನ್ನೂ ಕೆಲವರು ವಿಷಯಗಳ ಬಗ್ಗೆ ಸೂಚನೆಗಳನ್ನು ಕಳುಹಿಸಿದ್ದಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಂದು ಪತ್ರವನ್ನು ಬರೆದು ನನಗೆ ಸರಿಯಾದ ಮಾಹಿತಿ ಇದರ ಬಗ್ಗೆ ಬಂದಿಲ್ಲವಾದ್ದರಿಂದ 6ನೇ ತಾರೀಖು ಮಾನ್ಯ ಸದಸ್ಯರ ವಿಷಯಕ್ಕೆ ಉತ್ತರ ಕೊಡುತ್ತೇನೆಂದು ತಿಳಿಸಿದ್ದಾರೆ. ಆದ್ದರಿಂದ ಇದನ್ನು 6ನೇ ತಾರೀಖು ತೆಗೆದುಕೊಳ್ಳೋಣ.

ಶ್ರೀ ಹೆಚ್. ಏಕಾಂತಯ್ಯ :- 6ನೇ ತಾರೀಖು ಆಗುತ್ತದೆಯೋ ಅಥವಾ ಇನ್ನೂ ಮುಂದೆ ಹೋಗುತ್ತದೆಯೋ?

ಅಧ್ಯಕ್ಷರು :- 6ನೇ ತಾರೀಖು ಕೊಡುತ್ತೇನೆಂದು ಹೇಳಿದ್ದಾರೆ. ಅವರೇ ಪತ್ರ ಬರೆದಿದ್ದಾರೆ.

ಶ್ರೀ ಸಿ. ಭೈರೇಗೌಡ :- ನಾವು ಬಹಳ ಜನ ರುಜು ಹಾಕಿಕೊಟ್ಟಿದ್ದೇವೆ.

ಅಧ್ಯಕ್ಷರು :- ತಾವು 14 ಜನ ರುಜುಹಾಕಿ ಕೊಟ್ಟಿದ್ದೀರಿ, ನಾನು ಅದನ್ನು ನೋಡಿದ್ದೇನೆ. ಆದರೆ ನಾನು ಸರಿಯಾದ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಕೊಡಬೇಕಾದರೆ 6ನೇ ತಾರೀಖಿನವರೆಗೆ ನನಗೆ ಕಾಲಾವಕಾಶವನ್ನು ಕೊಡಬೇಕೆಂದು ಪತ್ರ ಬರೆದು ಕೇಳಿಕೊಂಡಿದ್ದಾರೆ.

ಮಾನ್ಯ ಮಲ್ಲಾರಿಗೌಡ ಎಸ್. ಪಾಟೀಲ್‌ರವರು ಮತ್ತು ಮಾನ್ಯ ಶಿವಾನಂದ ಎಸ್. ಕೌಜಲಗಿಯವರು ಕೇಳಿರತಕ್ಕಂಥ ವಿಷಯವನ್ನು ನಾಳೆ ತೆಗೆದುಕೊಳ್ಳಬೇಕಾಗುತ್ತದೆ.

ನಿಯಮ 334 ರ ಮೇರೆಗೆ

ವಿಷಯ (1) ಬೆಳಗಾಂ ಜಿಲ್ಲೆಯಲ್ಲಿ ದೇವದಾಸಿಯರ ಪುನರ್ವಸತಿ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್(ಸಂಕೇಶ್ವರ):- ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯಲ್ಲಿ ದೇವದಾಸಿಯರ ಪುನರ್ವಸತಿಗಾಗಿ ಹಮ್ಮಿಕೊಂಡಿರುವ 'ಕರಿಮಣಿ' ಯೋಜನೆಯಲ್ಲಿ ಎಷ್ಟು ದೇವದಾಸಿಯರಿಗೆ ಸರ್ಕಾರದಿಂದ ಸಹಾಯ ಮಾಡಲಾಗಿದೆ ? ಹಾಗೂ ದೇವದಾಸಿಯರ ಪುನರ್ವಸತಿಗಾಗಿ ಇನ್ನೂ ಹೆಚ್ಚಿನ ಯಾವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ? ಈ ಪಿಡುಗನ್ನು ತಪ್ಪಿಸಲು ಬಡತನದಲ್ಲಿರುವ 10 ವರ್ಷಕ್ಕೆ ಮೇಲ್ಪಟ್ಟು ಹೆಣ್ಣು ಮಕ್ಕಳನ್ನು ಗುರುತಿಸಿ ಅವರುಗಳು ದಾರಿ ತಪ್ಪದಂತೆ ಕಾನೂನುರೀತ್ಯಾ ರಕ್ಷಣೆ ಕೊಡುವ ವಿಚಾರ